ಸಿ.ಸಿ.೪೩೪/೨೦೧೬

ಪಿ.ಡಬ್ಲು-೩

ಸಾಕ್ಷಿಯನ್ನು ಇಂದು ದಿನಾಂಕ: ೦೯.೦೩.೨೦೨೩ ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲು ಆರೋಪಿತರ ಪರ ಶ್ರೀ ಬಿ.ಎ.ಡಿ. ವಕೀಲರಿಂದ</u>

ಘಟನೆ ಕುರಿತು ಫಿರ್ಯಾದಿ ಸಲ್ಲಿಸಲು ನಾನು, ಚಾಸಾ-೪, ೫ ಹೋಗಿರುತ್ತೇವೆ. ನಾವು ಎಷ್ಟು ಗಂಟೆಗೆ ಹೋಗಿರುತ್ತೇವೆ ಎಂದು ಸಮಯ ನನಗೆ ನೆನಪಿಲ್ಲ. ನಾನು ಫಿರ್ಯಾದಿಯನ್ನು ಬಾಯಿ ಮಾತಿನಿಂದ ಹೇಳುರುತ್ತೇನೆ, ಪೋಲಿಸ್ ಠಾಣೆಯಲ್ಲಿ ರೈಟರ್ ಬರೆದುಕೊಂಡಿರುತ್ತಾರೆ. ಫಿರ್ಯಾದಿಯನ್ನು ಪೋಲಿಸರು ಓದಿ ಹೇಳಿರುತ್ತಾರೆ. ಪೋಲಿಸರು ಫಿರ್ಯಾದಿಯನ್ನು ಓದಿ ಹೇಳುವ ಸಮಯದಲ್ಲಿ ಚಾಸಾ-೪ ಮತ್ತು ೫ ರವರು ಸಹ ಇದ್ದರು. ಓ.ಎಸ್. ನಂ. ೧೦೧/೨೦೧೦ ಆಳಂದ ನ್ಯಾಯಾಲಯದಲ್ಲಿ ಸ್ನೇಹಾ, ಸ್ವಪ್ನಾ ವಾದಿಯರು ಇರುತ್ತಾರೆ, ಪ್ರತಿವಾದಿ ಆರೋಪಿ ನಂ.೧, ನಾನು, ಚಾಸಾ-೪, ೫ ಇರುತ್ತೇವೆ ಎಂದರೆ ಸರಿ, ಸದರಿ ದಾವೆ ಭಾಗಶಃ ಡಿಕ್ರಿಯಾಗಿರುತ್ತದೆ ಎಂದರೆ ಸರಿ. ಮತ್ತು ೧೫೯/೨೦೧೦ ಆಳಂದ ನ್ಯಾಯಾಲಯದಲ್ಲಿ ಆರೋಪಿ ನಂ.೧ ನನ್ನ ಮತ್ತು ಚಾಸಾ-೪, ೫ ರವರ ವಿರುದ್ದ ಮಾಡಿದ್ದರು. ಸದರಿ ದಾವೆ ಡಿಕ್ರಿಯಾಗಿರುತ್ತದೆ ಎಂದರೆ ಸರಿ. ಸದರಿ ಎರಡೂ ಡಿಕ್ರಿಗಳ ವಿರುದ್ದ ಆಳಂದ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಮೇಲ್ಮನವಿ ಇರುತ್ತದೆ ಎಂದರೆ ಸರಿ. ನಿಪಿ-೧ ರಲ್ಲಿ ಸದರಿ ನ್ಯಾಯಾಲಯದಲ್ಲಿ ದಿವಾಣಿ ಸ್ವರೂಪದ ದಾವೆಗಳು ನಡೆದಿವೆ ಎಂದು ತಿಳಿಸಿರುವುದಿಲ್ಲ ಎಂದರೆ ಸರಿ. ಫಿರ್ಯಾದಿಯ ಜೊತೆಗೆ ಮೂರು ವರ್ಷ ಹಿಂದಿನ ಪಹಣಿ ಪತ್ರಿಕೆಗಳನ್ನು ನೀಡಿರುತ್ತೇವೆ. ಫಿರ್ಯಾದಿ ಸಲ್ಲಿಸುವ ಸಮಯದಲ್ಲಿ ನಾನು ಆರೋಪಿ ನಂ.೧ ರವರಿಗೆ ಬರೆದುಕೊಟ್ಟ ಕ್ರಯ ಪತ್ರವನ್ನು ಸಲ್ಲಿಸಿಲ್ಲ ಎಂಧರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಆರೋಪಿ ನಂ.೧ ನನಗೆ ಬರೆದುಕೊಟ್ಟ ಕ್ರಯ ಪತ್ರವನ್ನು ಹಾಜರುಪಡಿಸಿರುತ್ತೆನೆ ಎಂದು ನುಡಿಯುತ್ತಾರೆ. ಫಿರ್ಯಾದಿಯಲ್ಲಿ (ನಿಪಿ-೧)ರಲ್ಲಿ ಸದರಿ ದಾಖಲಾತಿಗಳು ಇದ್ದಾವೆ ಎಂದು ಬರೆದಿರುವುದಿಲ್ಲ ಎಂದರೆ ಸಾಕ್ಷಿ ಬರೆದಿರುತ್ತೇವೆ ಫಿರ್ಯಾದಿ ಜೊತೆಗೆ ಹಚ್ಚಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಫಿರ್ಯಾದಿಯ ಜೊತೆಗೆ ನಾನು ಜೆರಾಕ್ಸ ಪ್ರತಿಗಳನ್ನು ನೀಡಿರುತ್ತೇನೆ.

ನಾನು ನನ್ನ ಫಿರ್ಯಾದಿಯಲ್ಲಿ ಆರೋಪಿ ನಂ.೧ ರವರ ಹೆಸರಿನಲ್ಲಿ ಆಸ್ತಿ ಇರುತ್ತದೆ ಮತ್ತು ಅವಳೇ ಕಬ್ಜಾವಹಿವಾಟಿಯಲ್ಲಿದ್ದು ಬಿತ್ತು ಬೆಳೆ ಮಾಡುತ್ತಿದ್ದಾಳೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ನಾನು ಆರೋಪಿ ನಂ.೧ ರವರಿಗೆ ೩ ವರ್ಷಗಳ ಮಟ್ಟಿಗೆ ರೂ.೫,೭೫,೦೦೦/- ಗಳಿಗೆ ಮುದ್ದತ್ತ ರಜಿಸ್ಟರ್ ಹಾಕಿರುತ್ತೇನೆ ಎಂದು ತೋರಿಸಲು ಯಾವುದೇ ಕಾಗದ ಪತ್ರಗಳನ್ನು ತೋರಿಸಿರುವುದಿಲ್ಲ ಎಂದರೆ ಸರಿ ಅಲ್ಲ. ೩ ವರ್ಷದ ನಂತರ ನಾನು ಆರೋಪಿ ನಂ.೧ ರವರಿಗೆ ಸದರಿ ಹಣವನ್ನು ತೀರಿಸಲು ಹೋದಾಗ ಅವಳು ನಾನು ಖರೀದಿಗೆ ಹೊಲ ತೆಗೆದುಕೊಂಡಿರುತ್ತೇನೆ ಎಂದು ಹೇಳಿರುತ್ತಾಳೆ ಎಂದು ನಿಪಿ-೧ರಲ್ಲಿ ಬರೆಸಿರುತ್ತೇನೆ ಎಂಧರೆ ಸರಿ. ನಾನು ೨೦೦೯ ನೇ ಇಸವಿಯಲ್ಲಿ ಆರೋಪಿ ನಂ.೧ ರವರಿಗೆ ಹಣ ಮರಳಿ ನೀಡಲು ಹೋಗಿರುತ್ತೇನೆ, ನನ್ನ ಜೊತೆ ಬಾಬುರಾವ ಪಾಟೀಲ ಭುಸನೂರ, ಮೌಲಾಲಿ, ಶಿವರಾಜ ಇದ್ದರು. ನಾವು ಹಣ ಕೊಡಲು ಆರೋಪಿ ನಂ.೧ ರವರ ಮನೆ ಕಲಬುರಗಿಯ

ಸಂತೋಷ ಕಾಲನಿಯಲ್ಲಿ ಹೋಗಿರುತ್ತೇವೆ ಮತ್ತು ಖಜೂರಿಯಲ್ಲಿರುವ ಮನೆಗೆ ಹೋಗಿರುತ್ತೇವೆ ಎಂದು ನುಡಿಯುತ್ತಾರೆ.

*[* ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು *]*

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ